**ನೊಂದಣಿ ಮಾಡಿ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರುವ ಕರ್ನಾಟಕದ ಅಭ್ಯರ್ಥಿಗಳಿಗೆ ಮಾಹಿತಿ**

**ದಿನಾಂಕ: 11-12-2021**

- ಈಗಾಗಲೇ ಯುಜಿಸಿಇಟಿ-2021ಕ್ಕೆ ನೊಂದಣಿ ಮಾಡಿ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರುವವರು, ಯುಜಿನೀಟ್ 2021ರ ರೋಲ್ ನಂಬರ್ ಅನ್ನು ಕೆಇಎ ವೆಬ್‌ಪೋರ್ಟಲ್‌ನಲ್ಲಿ ವೈದ್ಯಕೀಯ / ದಂತವೈದ್ಯಕೀಯ / ಆಯುಷ್ ಕೋರ್ಸುಗಳ ಪ್ರವೇಶಾತಿಗಾಗಿ ದಾಖಲಿಸಬೇಕು ಆದರೆ ಮತ್ತೊಮ್ಮೆ ಶುಲ್ಕವನ್ನು ಪಾವತಿಸುವಂತಿಲ್ಲ, ಯುಜಿನೀಟ್ 2021ರ ರೋಲ್ ನಂಬರ್ ದಾಖಲಿಸಿದ ನಂತರ ಅರ್ಜಿ ನಮೂನೆಯ ಮುದ್ರಿತ ಪ್ರತಿ ಪ್ರಿಂಟ್ ತೆಗೆದುಕೊಂಡು ಅರ್ಜಿಯಲ್ಲಿ ಮುದ್ರಿತವಾಗಿರುವ ನೀಟ್ ರೋಲ್ ನಂಬರ್ ಅನ್ನು ಪರಿಶೀಲಿಸಿಕೊಳ್ಳಿ.
- ಯುಜಿಸಿಇಟಿ-2021 ರಲ್ಲಿ ರ್‍ಯಾಂಕ್ ಅನ್ನು ಪಡೆದು ಸಿಇಟಿ-2006ರ ನಿಯಮದಂತೆ ಈಗಾಗಲೇ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿ, ಹೆಚ್ಚುವರಿಯಾಗಿ ಕ್ಲೇಮ್ / ಬದಲಾವಣೆಯನ್ನು ಮಾಡದಿರುವವರು, ವೈದ್ಯಕೀಯ / ದಂತವೈದ್ಯಕೀಯ ಕೋರ್ಸುಗಳಿಗೆ ಮತ್ತೊಮ್ಮೆ ದಾಖಲೆಗಳ ಪರಿಶೀಲನೆಗೆ ಹಾಜರಾಗುವಂತಿಲ್ಲ, ಆದರೆ ನಿಗದಿ ಪಡಿಸುವ ದಿನಾಂಕಗಳಂದು UGNEET-2021 Verification Slip ಅನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು.
- CET-2006 ನಿಯಮಗಳ ಅನ್ವಯ ಒಂದು ವೇಳೆ ಮೀಸಲಾತಿಗೆ ಸಂಬಂಧಿಸಿದ ಬದಲಾವಣೆ ಮಾಡಿಕೊಂಡಲ್ಲಿ ಅಥವಾ Linguistic Minority ಸೀಟುಗಳನ್ನು ಅಥವಾ Religious Minority or NRI Ward seats ಸೀಟುಗಳನ್ನು ಅಥವಾ St. John Medical College, Bangalore, (Category-2 to Category-8 ) ನಲ್ಲಿ ನಿರ್ದಿಷ್ಟ ಸೀಟುಗಳನ್ನು ಪಡೆಯಲು ಅರ್ಹರಿದ್ದಲ್ಲಿ ಕೆಇಎ ವೆಬ್‌ಪೋರ್ಟಲ್‌ನಲ್ಲಿ ನಿಗದಿತ ಲಿಂಕ್ ಅನ್ನು ಆಯ್ಕೆ ಮಾಡಿ, ಕ್ಲೇಮ್ ಮಾಡಿ, ನಂತರ ಕ್ಲೇಮ್‌ಗೆ ಸಂಬಂಧಿಸಿದ ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ನಿಗದಿತ ದಿನಾಂಕಗಳಂದು ಪರಿಶೀಲನೆಗೆ ಹಾಜರಾಗಬೇಕು.
- ಯುಜಿಸಿಇಟಿ-2021 ರ ಅರ್ಜಿ ನಮೂನೆಯಲ್ಲಿ Linguistic Minority ಸೀಟುಗಳನ್ನು ಅಥವಾ Religious Minority or NRI Ward ಸೀಟುಗಳನ್ನು ಕ್ಲೇಮ್ ಮಾಡಿರುವವರೂ ಸಹ ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ನಿಗದಿತ ದಿನಾಂಕಗಳಂದು ಪರಿಶೀಲನೆಗೆ ಹಾಜರಾಗಬೇಕು.
- ಸಿಇಟಿ-2021ಕ್ಕೆ ನೊಂದಣಿ ಮಾಡದೇ ಇರುವ ಕರ್ನಾಟಕದ ಅಭ್ಯರ್ಥಿಗಳು, ಯುಜಿನೀಟ್ 2021 ರಲ್ಲಿ ಅರ್ಹತೆಯನ್ನು ಪಡೆದಿದ್ದರೆ, ವೈದ್ಯಕೀಯ / ದಂತ ವೈದ್ಯಕೀಯ / ಆಯುಷ್ ಕೋರ್ಸುಗಳ ಪ್ರವೇಶಾತಿಗಾಗಿ, ಅಭ್ಯರ್ಥಿಗಳು ಮೊದಲು ಕೆಇಎ ವೆಬ್‌ಪೋರ್ಟಲ್ ನಲ್ಲಿ ನೊಂದಣಿ ಮಾಡಿ, ಶುಲ್ಕವನ್ನು ಪಾವತಿಸಿ ನಂತರ ಎಲ್ಲಾ ಅಗತ್ಯ ಮೂಲ ದಾಖಲೆಗಳೊಂದಿಗೆ ವೇಳಾಪಟ್ಟಿಯಂತೆ ದಾಖಲೆಗಳ ಪರಿಶೀಲನೆಗೆ ಕೆಇಎ, ಬೆಂಗಳೂರು ಇಲ್ಲಿ ಹಾಜರಾಗಬೇಕು.
- ಸಿಇಟಿ-2021ಕ್ಕೆ ನೊಂದಣಿ ಮತ್ತು ಆನ್‌ಲೈನ್ ಅರ್ಜಿ ಭರ್ತಿ ಮಾಡಿ, ಶುಲ್ಕವನ್ನು ಪಾವತಿಸಿರುವವರು, ಆದರೆ ಸಿಇಟಿ-2021 ರಲ್ಲಿ ಯಾವುದೇ ವಿಭಾಗದಲ್ಲಿ ರ್‍ಯಾಂಕ್ ಬರದೇ ಇರುವ ಕಾರಣದಿಂದ ದಾಖಲೆಗಳ ಪರಿಶೀಲನೆಗೆ ಹಾಜರಾಗದಿರುವ ಅಭ್ಯರ್ಥಿಗಳು, ಯುಜಿನೀಟ್ 2021 ರಲ್ಲಿ ಅರ್ಹತೆಯನ್ನು ಪಡೆದಿದ್ದರೆ, ವೈದ್ಯಕೀಯ / ದಂತ ವೈದ್ಯಕೀಯ / ಆಯುಷ್ ಕೋರ್ಸುಗಳ ಪ್ರವೇಶಾತಿಗಾಗಿ, ಅಭ್ಯರ್ಥಿಗಳು ಮೊದಲು ಕೆಇಎ ವೆಬ್‌ಪೋರ್ಟಲ್ ನಲ್ಲಿ ನೊಂದಣಿ ಮಾಡಿ ನಂತರ ಎಲ್ಲಾ ಅಗತ್ಯ ಮೂಲ ದಾಖಲೆಗಳೊಂದಿಗೆ, ಪರಿಶೀಲನೆಗೆ ಕೆಇಎ, ಬೆಂಗಳೂರು ಇಲ್ಲಿ ಹಾಜರಾಗಬೇಕು.

ಸೂಚನೆ: ಕರ್ನಾಟಕದ ಅಭ್ಯರ್ಥಿಗಳು ಮಾತ್ರ ಸರ್ಕಾರದ ಪಾಲಿನ ಆಯುಷ್ ಸೀಟುಗಳನ್ನು ಪಡೆಯಲು ಅರ್ಹರಿರುತ್ತಾರೆ.